ಸಾಕ್ಷಿ ಯನ್ನು ದಿಃ 26.02.2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ

1. ನನಗೆ ಆರೋಪಿಯು 15 ವರ್ಷಗಳಿಂದ ಪರಿಚಯ. ಅವರು ನಮಗೆ ಸಂಬಂಧಿಕರಾಗಬೇಕು.
2. ಆರೋಪಿ ನನ್ನ ಬಳಿ 2014 ರ ಡಿಸೆಂಬರ್ ಮೊದಲ ವಾರದಲ್ಲಿ ಕೇಳಿದ್ದು, ನಾನು ಡಿಸೆಂಬರ್ ಕೊನೆಯ ವಾರದಲ್ಲಿ ಹಣ ನೀಡಿರುತ್ತೇನೆ. ಅವರು 6 ಲಕ್ಷ ಹಣ ಕೇಳಿದ್ದರು. ನಾನು 6 ಲಕ್ಷ ಹಣ ನೀಡಿದ್ದೆ. ಯಾವುದೇ ಬಡ್ಡಿ ಮಾತುಕತೆಯಾಗಿರಲಿಲ್ಲ.
3. ನಾನು ನಮ್ಮ ಮನೆಯಲ್ಲಿ ಹಣ ನೀಡಿದ್ದೆ. ನಾನು ಹಣ ನೀಡುವಾಗ ನನ್ನ ಪತ್ನಿ ಇದ್ದರು.
4. ನೀವು ಹಣ ನೀಡಿದಾಗ ಅವರು ಚೆಕ್ ನೀಡಿದರಾ ಎಂದರೆ, ನೀಡಿರಲಿಲ್ಲ.
5. ನಾನು ನೀಡಿದ ಹಣ ಎಷ್ಟು ಮುಖಬೆಲೆಯ, ಎಷ್ಟು ನೋಟುಗಳು ಎಂದು ಈಗ ನನಗೆ ನೆನಪಿಲ್ಲ.
6. ನಾನು ನೀಡಿದ 6 ಲಕ್ಷ ಹಣ ನನ್ನ ಜಮೀನಿನಿಂದ, ನನ್ನ ಹಾಗೂ ನನ್ನ ಮಗಳ ಸಂಬಳಂದ ಉಳಿತಾಯ ಮಾಡಿರುವ ದುಡ್ಡಾಗಿರುತ್ತದೆ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.
7. ನನ್ನ ಆದಾಯದ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.
8. ನನಗೆ ವರ್ಷಕ್ಕೆ ಸುಮಾರು 3-4 ಲಕ್ಷ ಆದಾಯವಿದೆ.
9. ನಾನೇ ಬಡ್ಡಿ ವ್ಯವಹಾರ ಮಾಡುತ್ತಿದ್ದು, ಆರೋಪಿಯ ಮುಖಾಂತರ ಬೇರೆಯವರಿಗೆ ಬಡ್ಡಿಗೆ ಹಣ ನೀಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆರೋಪಿಯೊಂದಿಗೆ ಬೇರೆ ವ್ಯವಹಾರ ಮಾಡಿಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಪಿರಿಯಾಪಟ್ಟಣ